ಕರ್ನಾಟಕ ಸರ್ಕಾರ

ಜುಲೈ 17, 2017

# ಕಾರಾಗೃಹ ಇಲಾಖೆಯಲ್ಲಿನ
# ಹಿರಿಯ ಅಧಿಕಾರಿಗಳ ವರ್ಗಾವಣೆ : ಒಂದು ಸ್ಪಷ್ಟೀಕರಣ

**ಬೆಂಗಳೂರು, ಜುಲೈ 17:**

ಬೆಂಗಳೂರಿನ ಪರಪ್ಪನ ಅಗ್ರಹಾರದಲ್ಲಿರುವ ಕೇಂದ್ರ ಕಾರಾಗೃಹದಲ್ಲಿ ಅಕ್ರಮಗಳು ನಡೆದಿವೆ ಎಂದು ಇತ್ತೀಚೆಗೆ ಕಾರಾಗೃಹಗಳ ಉಸ್ತುವಾರಿ ಹೊತ್ತಿದ್ದ ಡಿಐಜಿ ಡಿ.ರೂಪಾ ಅವರು ಇಲಾಖೆಗೆ ವರದಿಯನ್ನು ನೀಡಿದ್ದರು. ವರದಿಯಲ್ಲಿನ ಅಂಶಗಳು ಮಾಧ್ಯಮಗಳಿಗೆ ಸೋರಿಕೆಯಾದ ಹಿನ್ನೆಲೆಯಲ್ಲಿ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿತ್ತು. ವರದಿಯನ್ನು ಗಂಭೀರವಾಗಿ ಪರಿಗಣಿಸಿದ ಸರ್ಕಾರ ನಿವೃತ್ತ ಐಎಎಸ್ ಅಧಿಕಾರಿ ವಿನಯ್ ಕುಮಾರ್ ನೇತೃತ್ವದಲ್ಲಿ ತನಿಖೆಗೆ ಆದೇಶಿಸಿದೆ. ಪ್ರಾಥಮಿಕ ವರದಿಯನ್ನು ಒಂದು ವಾರದ ಅವಧಿಯಲ್ಲಿ ಸಲ್ಲಿಸುವಂತೆ ಸೂಚಿಸಲಾಗಿದ್ದು ಸಮಗ್ರ ವರದಿ ಸಲ್ಲಿಕೆಗೆ ಒಂದು ತಿಂಗಳ ಗಡುವು ನೀಡಲಾಗಿದೆ.

ಇಡೀ ಪ್ರಕರಣದಲ್ಲಿ ಇಲಾಖಾ ನಿಯಮಾವಳಿಗಳಿಗೆ ಬದ್ಧವಾಗಿ ನಡೆದುಕೊಳ್ಳಬೇಕಾದ ಹೊಣೆ ಹಿರಿಯ ಅಧಿಕಾರಿಗಳಾದ ಡಿಐಜಿ ಡಿ. ರೂಪಾ ಹಾಗೂ ಬಂಧೀಖಾನೆಗಳ ಮುಖ್ಯಸ್ಥರಾದ ಡಿಜಿಪಿ ಎಚ್.ಎನ್.ಸತ್ಯನಾರಾಯಣ ರಾವ್ ಅವರದ್ದಾಗಿತ್ತು. ಇದಕ್ಕೆ ವ್ಯತಿರಿಕ್ತವಾಗಿ ನಡೆದುಕೊಂಡು ಸೇವಾ ನಡಾವಳಿಗಳನ್ನು ಉಲ್ಲಂಘಿಸಿದ ಕಾರಣಕ್ಕೆ ಈ ಇಬ್ಬರು ಐಪಿಎಸ್ ಅಧಿಕಾರಿಗಳಿಗೆ ದಿ.14.07.2017ರಂದು ಕಾರಣ ಕೇಳಿ ಶೋಕಾಸ್ ನೋಟಿಸ್ ನೀಡಲಾಗಿತ್ತು. ಆ ನಂತರದ ಬೆಳವಣಿಗೆಯಲ್ಲಿ ಇಬ್ಬರು ಅಧಿಕಾರಿಗಳೂ ಪರಪ್ಪನ ಅಗ್ರಹಾರದ ಕೇಂದ್ರ ಕಾರಾಗೃಹಕ್ಕೆ ಭೇಟಿ ನೀಡಿದ್ದರು. ಈ ವೇಳೆ ಕೇಂದ್ರ ಕಾರಾಗೃಹದಲ್ಲಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಾಣವಾಗಿತ್ತು.

ಡಿಐಜಿ ಹಾಗೂ ಡಿಜಿಪಿಯವರು ಸೇವಾ ನಿಯಮಾವಳಿಗಳಿಗೆ ಬದ್ಧರಾಗಿ ತನಿಖೆಗೆ ಸಹಕರಿಸುವ ನಿಟ್ಟಿನಲ್ಲಿ ಗಮನಹರಿಸದೆ ಸಾರ್ವಜನಿಕವಾಗಿ ಒಬ್ಬರು ಮತ್ತೊಬ್ಬರ ವಿರುದ್ಧ ಹೇಳಿಕೆಗೆ ತೊಡಗಿದ್ದು ಇಲಾಖಾ ನಿಯಮಾವಳಿಗಳಿಗೆ ವ್ಯತಿರಿಕ್ತವಾಗಿತ್ತಲ್ಲದೆ ಇಲಾಖೆಯ ಘನತೆಗೆ ಕುಂದುಂಟು ಮಾಡುವಂಥದ್ದಾಗಿತ್ತು. ಪ್ರಕರಣದ ತನಿಖೆಯ ವೇಳೆ ಅನಗತ್ಯ ಆರೋಪ, ಪ್ರತ್ಯಾರೋಪಗಳಿಂದ ಒತ್ತಡ ನಿರ್ಮಾಣವಾಗಬಾರದು ಎನ್ನುವ ಮುನ್ನೆಚ್ಚರಿಕೆಯನ್ನಿರಿಸಿಕೊಂಡು ಸರ್ಕಾರವು ಡಿಐಜಿ ಡಿ. ರೂಪಾ

ಅವರನ್ನು ತತ್‌ಕ್ಷಣದಿಂದ ಜಾರಿಗೆ ಬರುವಂತೆ ಸಂಚಾರ ಮತ್ತು ರಸ್ತೆ ಸುರಕ್ಷಾ ವಿಭಾಗದ ಆಯುಕ್ತರನ್ನಾಗಿ ವರ್ಗಾವಣೆ ಮಾಡಿದೆ.

ಡಿಜಿಪಿ ಎಚ್. ಎನ್. ಸತ್ಯನಾರಾಯಣ ರಾವ್ ಅವರನ್ನು ಕಡ್ಡಾಯ ರಜೆಯಲ್ಲಿರುವಂತೆ ಆದೇಶಿಸಲಾಗಿದೆ. ಸರ್ಕಾರದ ಈ ಕ್ರಮದಿಂದಾಗಿ ತನಿಖೆಯು ಸುಗಮವಾಗಿ, ನಿಷ್ಪಕ್ಷಪಾತವಾಗಿ ನಡೆಯಲು ಸಹಕಾರಿಯಾಗಲಿದ್ದು, ಸತ್ಯಾಸತ್ಯತೆಯು ಹೊರಬರಲಿದೆ. ವರದಿಯನ್ನಾಧರಿಸಿ ತಪ್ಪಿತಸ್ಥರ ವಿರುದ್ಧ ಸರ್ಕಾರ ಕಠಿಣ ಕ್ರಮ ಕೈಗೊಳ್ಳಲಿದೆ.

***********

ಡಿ ಪಿ ಎಂ

# TRANSFER OF OFFICERS IN THE DEPARTMENT OF PRISON : A CLARIFICATION

**BENGALURU, JULY 17:**

**In its unrelenting pursuit of truth and justice, the Government of Karnataka has made consistent efforts to inquire into and act strictly upon cases of serious irregularities, in the larger public interest.**

**On receiving a report of allegations of irregularities in Bengaluru's Parappana Agrahara Central Prison by Deputy Inspector General (Prisons) D Roopa, the Government of Karnataka immediately ordered a high-level inquiry into the case, to unearth facts. This decision was taken in view of the Government's commitment to public interest, truth and justice. The Government was quick to institute an Inquiry Commission headed by retired IAS officer Vinay Kumar, asked to submit a preliminary report of findings within one week and a final comprehensive report looking into the details of allegations of irregularities within a month.**

**However, the public conduct after the DIG's first report, and despite the immediate institution of inquiry, have not been in the**

**spirit of officers abiding by service rules and protocol. Despite the inquiry being in process, the Deputy Inspector General (Prisons) D Roopa and her senior, Director General of Police (Prisons) H N Sathyanarayana Rao – went to the media to discuss the case. The interaction of both police officers with the media during the course of inquiry was unwarranted, and amounted to a serious violation of All India Services Conduct Rules.**

**In view of this violation, the Government issued show cause notice to both the officers. The subsequent visit by the concerned officers to Parappana Agrahara Central Prison witnessed disturbance emerging in the jail premises.**

**In order to maintain the sanctity of the inquiry process and safeguard it from further interference, the Government has asked the DGP (Prisons) H N Sathyanarayana Rao to proceed on leave, while DIG (Prisons) D Roopa has been transferred as Deputy Inspector General of Police and Commissioner for Traffic and Road Safety, Bengaluru. The Government is committed to allow the inquiry to proceed unhinged: so that evidence based truth emerges, following which necessary and strict action will be taken to bring the guilty to book, according to a press release by the Chief Minister's Secretariat.**

*************

**dpm**